ಅವಕಾಶ ಸದಸ್ಯರಿಗೆ ಹೇಗೆ ಸಿಗಬೇಕು ಎನ್ನುವುದನ್ನು ದಯವಿಟ್ಟು ತಿಳಿದುಕೊಂಡು ಅವಕಾಶ ಮಾಡಿಕೊಡಬೇಕೆಂದು ನಿಮ್ಮನ್ನು ಕೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ 2 ಕೋಟಿ 63 ಲಕ್ಷ ರೂಪಾಯಿಗಳನ್ನು ಔಷಧಿ ತೆಗೆದುಕೊಳ್ಳುವುದಕ್ಕೆ ಬಜೆಟ್‌ನಲ್ಲಿ ಕೊಟ್ಟಿದ್ದಾರೆ. ಅದರಲ್ಲಿ 53 ಲಕ್ಷರೂಪಾಯಿಗಳನ್ನು ಮಾತ್ರ ಔಷಧಿಗೆ ಕೊಟ್ಟಿದ್ದಾರೆ. ಹಳ್ಳಿಗಳಲ್ಲಿ ಔಷಧಿ ಇಲ್ಲ, ದನಕರುಗಳು ದೊಡ್ಡ ಬೇನೆಯಿಂದ ಸಾಯುತ್ತಿವೆ. ದಯವಿಟ್ಟು ಇಂಥ ಪ್ರಸಂಗದಲ್ಲಿ ಹಣವನ್ನು ಒದಗಿಸಿದರೂ ಏಕೆ ಖರ್ಚು ಮಾಡಲಿಲ್ಲ? ಇದು ರೈತರ ವಿಷಯ. ಇದು ಪಶು ಶಾಲೆಗಳ ವಿಷಯ. ಈ ಮಹತ್ವದ ವಿಷಯಕ್ಕೆ ಅವಕಾಶವಿಲ್ಲ. ದಯವಿಟ್ಟು ಇದನ್ನು ಸರಿಪಡಿಸಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು : ನಮ್ಮ ಮುಖ್ಯಮಂತ್ರಿಗಳಾದ್ದು, ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ಚೌಕಟ್ಟಿನಲ್ಲಿ ನಾನು ಸಭೆ ನಡೆಸುವುದಕ್ಕೆ ಅವಕಾಶ ಕೊಡುವುದಾದರೆ ಒಳ್ಳೆಯದು. ಇಲ್ಲವೆಂದರೆ ನಾನು ನಿವೃತ್ತಿಯಾಗುವುದಕ್ಕೆ ನೀವು ಅವಕಾಶ ಮಾಡಿಕೊಡಬೇಕೆಂದು ಹೇಳಿ ಈಗ ಸಭೆಯನ್ನು 2 ಗಂಟೆಯವರೆಗೂ ಮುಂದಕ್ಕೆ ಹಾಕುತ್ತೇನೆ.

(ಸದನವು ಮತ್ತೆ 2-30 ಕ್ಕೆ ಸಮಾವೇಶಗೊಂಡಿತು.)

ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಮತ್ತು ನಮ್ಮ ಮಾನ್ಯ ಬೈರೇಗೌಡರು ಸೇರಿ ಒಂದು ಹಕ್ಕುಚ್ಯುತಿ ನಿರ್ಣಯವನ್ನು ತಮಗೆ ಕಳುಹಿಸಿ ಕೊಟ್ಟಿದ್ದೇವೆ. ಆವತ್ತು ದೂರದರ್ಶನದ ಕ್ಯಾಮರಾದವರು ವಿರೋಧ ಪಕ್ಷದ ನಾಯಕರಿಗೆ ಅಗೌರವ ಮಾಡಿರತಕ್ಕಂಥದ್ದು ಮತ್ತು ಈ ಸಭೆಯಲ್ಲಿ ನಡೆದಿರತಕ್ಕಂಥ ಪ್ರತಿಭಟನೆಯ ಪ್ರದರ್ಶನಗಳನ್ನು..

ಅಧ್ಯಕ್ಷರು : ಒಂದು ನಿಮಿಷ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಇಡಬೇಕು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಉತ್ತರದ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಬಾಡಿಗೆ ನಿಯಂತ್ರಣ ಕಾರ್ಯಕ್ರಮದ ಬಗ್ಗೆ.

53 - ಶ್ರೀ ಬಿ.ಎಂ. ಇದಿನಬ್ಬ(ಉಳ್ಳಾಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಮನೆ ಇನ್ನಿತರ ಬಾಡಿಗೆದಾರರ ಬಗ್ಗೆ ಬಾಡಿಗೆ ನಿಯಂತ್ರಣ ಕಾರ್ಯವನ್ನು ಸರ್ಕಾರ ಪರಿಶೀಲಿಸಿದೆಯೇ?

ಆ) ಪ್ರಮೀಳ ಸಮಿತಿಯ ವರದಿಯನ್ನು ಸರ್ಕಾರ ಅಂಗೀಕಾರ ಮಾಡುವುದೇ?

ಇ) ಆ ವರದಿಯನ್ನು ಎಂದಿನಿಂದ ಜಾರಿಗೆ ತರಲಾಗುತ್ತದೆ.